ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿ ಅಡಿಯಲ್ಲಿ ಸಹ ಪ್ರಾಧ್ಯಾಪಕರ ವೇತನ ಶ್ರೇಣಿ ರೂ.37400-67000+9000 ಉನ್ನತ ಎ.ಜಿ.ಪಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 37 ಯುಎನ್ಇ 2009, ದಿ:24.12.2009 ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶ ಹಾಗೂ ಮಾರ್ಗಸೂಚಿಗಳು.
2. ಯು.ಜಿ.ಸಿ. ನಿಯಮಗಳ ಆದೇಶ ಸಂಖ್ಯೆ: ಎಫ್3-1/ 2009, ದಿ:30.06.2010
3. ಯು.ಜಿ.ಸಿ.ಯ ಅರೆ ಸರ್ಕಾರಿ ಪತ್ರ ಸಂಖ್ಯೆ: ಎಫ್1.2/2009 EC/PS-V(i)vol-II, ದಿ:14.06.2013 ರೊಂದಿಗೆ ಲಗತ್ತಿಸಿರುವ ದಿ:13.06.2013ರ ಯು.ಜಿ.ಸಿ. ನಿಯಮಗಳ ತಿದ್ದುಪಡಿಆದೇಶ
4. ಸರ್ಕಾರಿಆದೇಶ ಸಂಖ್ಯೆ: ಇಡಿ 382 ಯುಎನ್ಇ 2012, ದಿ:25.09.2014
5. ಯು.ಜಿ.ಸಿ.ಯ ದಿನಾಂಕ: 04.05.2016 ಹಾಗೂ 11.07.2016ರ ಅಧಿಸೂಚನೆ.
6. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 382 ಯುಎನ್ಇ 2012 ದಿನಾಂಕ: 22.02.2017.
7. ಈ ಕಛೇರಿ ದಿನಾಂಕ : 27.04.2017 ಮತ್ತು 20.07.2017ರ ಸಮಸಂಖ್ಯೆಯ ಸುತ್ತೋಲೆಗಳು.
8. ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳು.
9. ಕೇಂದ್ರ ಕಛೇರಿಯಲ್ಲಿ ದಿನಾಂಕ:29.11.2017ರಂದು ನಡೆದ ವೃತ್ತಿ ಪದೋನ್ನತಿ ಪರಿಶೀಲನಾ ಸಮಿತಿಯ ಸಭೆ.

* * * *

**ಪ್ರಸ್ತಾವನೆ :**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳ 2006ರ ಯು.ಜಿ.ಸಿ. ವೇತನ ಶ್ರೇಣಿಗಳನ್ನು ಉಲ್ಲೇಖ(1) ಹಾಗೂ (2)ರ ಆದೇಶಗಳಲ್ಲಿ ಜಾರಿಗೊಳಿಸಲಾಗಿರುತ್ತದೆ. ಈ ಆದೇಶದ ಪ್ರಕಾರ ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿ ರೂ. 15,600-39,100+8000 ಎ.ಜಿ.ಪಿ.ಯಿಂದ 03 ವರ್ಷಗಳ ಸೇವೆಯನ್ನು ಪರಿಗಣಿಸಿ ಸಹ ಪ್ರಾಧ್ಯಾಪಕರ ಹುದ್ದೆಯ ವೇತನ ಶ್ರೇಣಿ ರೂ.37400-67000+9000 ಎ.ಜಿ.ಪಿ.ಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಉಲ್ಲೇಖ (2) ರ ಯು.ಜಿ.ಸಿ.ನಿಯಮಗಳಿಗೆ ತಿದ್ದುಪಡಿಗಳನ್ನು ಉಲ್ಲೇಖ (3) ಹಾಗೂ (5)ರಲ್ಲಿ ಹೊರಡಿಸಲಾಗಿರುತ್ತದೆ. ಉಲ್ಲೇಖ (6)ರ ಸರ್ಕಾರದ ದಿನಾಂಕ:22.02.2017ರ ತಿದ್ದುಪಡಿ ಆದೇಶದಲ್ಲಿ

ಯು.ಜಿ.ಸಿ.ಯ ದಿನಾಂಕ: 04.05.2016 ಮತ್ತು ದಿನಾಂಕ: 11.07.2016 ರ ಮಾರ್ಗಸೂಚಿಗಳನ್ನು ಅಳವಡಿಸಲಾಗಿರುತ್ತದೆ.

ಸರ್ಕಾರ ಹಾಗೂ ಯು.ಜಿ.ಸಿ.ಯ ಉಲ್ಲೇಖ (1) ರಿಂದ (2)ರವರೆಗಿನ ಆದೇಶಗಳನ್ವಯ 2006ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಎ.ಪಿ.ಐ. ಅಂಕಗಳ ಆಧಾರಿತ ವೃತ್ತಿಪದೋನ್ನತಿ (Career Advancement Scheme) ಮಂಜೂರು ಮಾಡಲು ಉಲ್ಲೇಖ (4) ಮತ್ತು (6)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (1) ರಿಂದ (6) ರವರೆಗಿನ ಯುಜಿಸಿ ಹಾಗೂ ಸರ್ಕಾರದ ಆದೇಶ ಮತ್ತು ಮಾರ್ಗಸೂಚಿಗಳ ಅನುಸಾರ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿ ರೂ.9000/- ಎ.ಜಿ.ಪಿ. ಮಂಜೂರಾತಿ ಸಂಬಂಧದಲ್ಲಿ ಪ್ರಾಂಶುಪಾಲರು ತಮ್ಮ ಹಂತದಲ್ಲಿ ಯು.ಜಿ.ಸಿ.ಯ ದಿನಾಂಕ:30-6-2010ರ ಕಂಡಿಕೆ 5.1.5 ರಂತೆ ಆಯ್ಕೆ ಸಮಿತಿಯನ್ನು ರಚಿಸಿಕೊಂಡು ಸಹಾಯಕ ಪ್ರಾಧ್ಯಾಪಕರುಗಳಿಗೆ ಸಂಬಂಧಿಸಿದಂತೆ, ಯುಜಿಸಿಯ ದಿ. 11/07/2016ರ ಅಧಿಸೂಚನೆಯಲ್ಲಿ ನೀಡಲಾಗಿರುವ APPENDIX-III, Table-I (Proposed scores for API in CAS) (Category I, II & III), Table-II (Minimum points Norms of API) ಮತ್ತು Table-III (Minimum Service Requirements) ಗಳನ್ವಯ ಕೂಲಂಕುಷವಾಗಿ ಪರಿಶೀಲಿಸಿ, ಎ.ಪಿ.ಐ. ಅಂಕಗಳನ್ನು ಆಧಾರಿಸಿ ಉನ್ನತ ಎ.ಜಿ.ಪಿ.ಗೆ ಅರ್ಹರಿರುವವರ ಮಾಹಿತಿಗಳನ್ನು ಮಾತ್ರ ನಿಗದಿತ ನಮೂನೆ-1 ಮತ್ತು ಭಾಗ-2 ರಲ್ಲಿ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನೊಂದಿಗೆ ಅನುಮೋದನೆಗೆ ಸಲ್ಲಿಸುವಂತೆ ಉಲ್ಲೇಖ (7)ರ ಸುತ್ತೋಲೆಗಳಲ್ಲಿ ತಿಳಿಸಲಾಗಿದೆ. ಅದರ ಪ್ರಕಾರ ಪ್ರಾಂಶುಪಾಲರ ಹಂತದ ಸಮಿತಿಯು ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಗೆ ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿ ರೂ.9000/- ಉನ್ನತ ಎ.ಜಿ.ಪಿಗಾಗಿ ಶಿಫಾರಸ್ಸು ಮಾಡಿರುತ್ತಾರೆ. ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಈ ಕಛೇರಿಯ ಹಂತದಲ್ಲಿ ಪರಿಶೀಲಿಸಿ ಅರ್ಹತಾ ಪಟ್ಟಿಯನ್ನು ಕೇಂದ್ರ ಕಛೇರಿ ವೃತ್ತಿ ಪದೋನ್ನತಿ ಪರಿಶೀಲನಾ ಸಮಿತಿಯ ಮುಂದೆ ದಾಖಲೆಗಳೊಂದಿಗೆ ಹಾಜರುಪಡಿಸಲಾಯಿತು. ಸದರಿ ವೃತ್ತಿ ಪದೋನ್ನತಿ ಸಮಿತಿಯು ಅರ್ಹ ಸಹಾಯಕ ಪ್ರಾಧ್ಯಾಪಕರನ್ನು ಸಂದರ್ಶನಕ್ಕೆ ಆಹ್ವಾನಿಸಿ ಸಂದರ್ಶನಕ್ಕೆ ಹಾಜರಾದ ಉಪನ್ಯಾಸಕರ ಮೂಲ ಪ್ರಮಾಣ ಪತ್ರ, ಪ್ರಕಟಿಸಿರುವ ಲೇಖನ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿ ರೂ.9000/- ಉನ್ನತ ಎ.ಜಿ.ಪಿ. ಮಂಜೂರು ಮಾಡಲು ತೀರ್ಮಾನಿಸಲಾಯಿತು. ಇಲಾಖಾ ಹಂತದ ಸಿ.ಎ.ಎಸ್ ಸಮಿತಿಯ ತೀರ್ಮಾನದಂತೆ ರೂ.9000/-ಉನ್ನತ ಎ.ಜಿ.ಪಿ ಮಂಜೂರು ಮಾಡಲು ಈ ಆದೇಶ.

**<u>ಆದೇಶ ಸಂಖ್ಯೆ:ಕಾಶಿಇ/137/ಎಜಿಪಿ/2016-17/ಬಸ್ಥಾವಿ ಬೆಂಗಳೂರು, ದಿನಾಂಕ : 15.03.2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ದಿನಾಂಕ : 25.09.2014 ಹಾಗೂ 22.02.2017ರ ಸಂಖ್ಯೆ : ಇಡಿ/382/ಯುಎನ್‌ಇ/2012 ರ ಆದೇಶಗಳಲ್ಲಿನ ಅನುಮೋದನೆಗಳ ಪ್ರಕಾರ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಹಾಗೂ ಇಲಾಖಾ ಹಂತದ ವೃತ್ತಿ ಪದೋನ್ನತಿ ಸಮಿತಿಯ ತೀರ್ಮಾನದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಯ ವೇತನ ಶ್ರೇಣಿ ರೂ. 37400-67000 ರಲ್ಲಿ ರೂ.9000/- ಉನ್ನತ